ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಕ ಸಚಿವರು)

ಅ) ಬಂದಿದೆ

ಆ) ಹೌದು – ಮಾನ್ಯ ಲೋಕಾಯುಕ್ತವು ತನಿಖಾ ವರದಿಯಲ್ಲಿ ಸರ್ಕಾರಕ್ಕೆ ನಷ್ಟವಾಗಿರುವ ರೂ 70 85 ಲಕ್ಷಗಳನ್ನು ಕೆ.ಎ ಪಿ ಎಲ್ ಮತ್ತು ಡಾ॥ ಬಿ ಬಿ ತಂಬಾಕದ, ಅವರಿಂದ ವಸೂಲಿ ಮಾಡಬೇಕಾಗುತ್ತದೆ ಎಂದು ತಿಳಿಸಿರುವುದರಿಂದ ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳ ನಿಯಮ–14ಎ ರಡಿಯಲ್ಲಿ ಸಂಪೂರ್ಣವಾಗಿ ಇಲಾಖಾ ವಿಚಾರಣೆ ಮಾಡಲು ಲೋಕಾಯುಕ್ತಕ್ಕೆ ವಹಿಸುವಂತೆ ಶಿಫಾರಸ್ಸು ಮಾಡಿರುವರು

ಇ) 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳ ನಿಯಮ 14ಎ ರಡಿಯಲ್ಲಿ ಪ್ರದತ್ತವಾದ ಅಧಿಕಾರದನ್ವಯ ಇವರ ವಿರುದ್ಧ ಕೂಲಂಕಷ ವಿಚಾರಣೆ ನಡೆಸಿ, ವರದಿ ಸಲ್ಲಿಸಲು ಸರ್ಕಾರದ ಆದೇಶ ಸಂಖ್ಯೆ ಆಕುಕ 99 ಎಂಎಸ್‌ಎ 2002 ದಿನಾಂಕ 1/1/2004ರಲ್ಲಿ ಕರ್ನಾಟಕ ಲೋಕಾಯುಕ್ತರಿಗೆ ವಹಿಸಿದೆ ವರದಿ ನಿರೀಕ್ಷಿಸಲಾಗಿದೆ

ಮಹಾನಗರ ಪಾಲಿಕೆಯ ವ್ಯಾಪ್ತಿಗಳಲ್ಲಿ ಕೊಳವೆ ಬಾವಿ ನಿರ್ಮಾಣ

29 (174) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹೈಯಾತ್ ಖಾನ್ (ಹುಬ್ಬಳ್ಳಿ) ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2000–01, 2001–02, 2002–03ದಲ್ಲಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಎಷ್ಟು ಕೊಳವೆ ಬಾವಿ ತೋಡಲಾಗಿದೆ (ವರ್ಷವಾರು ಹಾಗೂ ವಿಭಾಗವಾರು ವಿವರನೀಡುವುದು)

ಆ) ಕಳೆದ 3 ಸಾಲಿನಲ್ಲಿ ತೋಡಲಾದ ಕೊಳವೆ ಬಾವಿಗಳು ಎಷ್ಟು ಪ್ರಾರಂಭವಾಗಿವೆ ಎಷ್ಟು ನಿಷ್ಕ್ರಿಯಗೊಂಡಿವೆ (ವರ್ಷವಾರು ವಿವರ ನೀಡುವುದು)

ಇ) ಕೊಳವೆ ಬಾವಿ ತೋಡಲಿಕ್ಕಾಗಿ ಖರ್ಚು ಮಾಡಿದ ಹಣವೆಷ್ಟು? ಇದರಿಂದ ನಾಗರೀಕರಿಗೆ ಎಷ್ಟು ಸದುಪಯೋಗವಾಗಿದೆ?

ಶ್ರೀ ಡಿ ಕೆ ಶಿವಕುಮಾರ್ (ನಗರಾಭಿವೃದ್ಧಿ ಸಚಿವರು)

ಅ) 2000–2001, 2001–2002 ಹಾಗೂ 2002–2003ನೇ ಸಾಲಿನಲ್ಲಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಒಟ್ಟು 501 ಕೊಳವೆ ಬಾವಿಗಳನ್ನು ತೋಡಲಾಗಿದೆ ವರ್ಷವಾರು ವಿವರಗಳು ಈ ಕೆಳಗಿನಂತಿವೆ

	2000–01,	**2001–02,**	**2002–03**	**ಒಟ್ಟು**
ಕೋ ಬಾ	137	227	13 /	501

(ವಾರ್ಡ್‌ವಾರು ವರ್ಷವಾರು ವಿವರವಾದ ಮಾಹಿತಿ ಪ್ರತ್ಯೇಕವಾಗಿ ಲಗತ್ತಿಸಿದೆ)

ಆ) ಕಳೆದ ಮೂರು ಸಾಲಿನಲ್ಲಿ ತೋಡಲಾದ ಒಟ್ಟು 501 ಕೊಳವೆ ಬಾವಿಗಳ ಪೈಕಿ 26 ಕೊಳವೆ ಬಾವಿಗಳು ನಿಷ್ಕ್ರಿಯಗೊಂಡಿವೆ ವರ್ಷವಾರು ವಿವರಗಳು ಈ ಕೆಳಕಂಡಂತಿವೆ

ಕೊಳವೆ ಬಾವಿಗಳು

	ವರ್ಷ	ಪ್ರಾರಂಭಗೊಂಡಿದ್ದು	ನಿಷ್ಕ್ರಿಯ	ಒಟ್ಟು
1	2000–01	130 ಸಂಖ್ಯೆ	07 ಸಂಖ್ಯೆ	137
2	2001–02	216 ಸಂಖ್ಯೆ	11 ಸಂಖ್ಯೆ	227
3	2002–03	129 ಸಂಖ್ಯೆ,	08 ಸಂಖ್ಯೆ	137
		475 ಸಂಖ್ಯೆ	26 ಸಂಖ್ಯೆ	501

ಇ) ಕೊಳವೆ ಬಾವಿ ತೋಡಲು ಖರ್ಚು ಮಾಡಿದ ಹಣದ ವಿವರ ಇಂತಿದೆ

2000–2001

ರೂ 76,26,966 00

2001–2002

1,17,41,478 00

2002–2003

1,11,42,921 00

ಈ ಕುರಿತು ವಿಶೇಷವಾಗಿ ನೀರಸಾಗರ ಜಲಾಶಯ ಬತ್ತಿಹೋದ ನಂತರ, ಈ ಮೂಲದಿಂದ ನೀರು ಪೂರೈಕೆಯಾಗುವ ಪ್ರದೇಶಗಳಿಗೆ ಇಂತಹ ವ್ಯವಸ್ಥೆಯಿಂದ ಸದುಪಯೋಗವಾಗಿದೆ ಇಲ್ಲಿಯವರೆಗೆ ಕೊರೆಯಲಾದ ಒಟ್ಟಾರೆ ಕೊಳವೆ ಬಾವಿಗಳಿಂದ ಲಭ್ಯವಾಗುವ ನೀರು ಸದ್ಯದ ಬೇಡಿಕೆಯ ಪ್ರತಿ ಶತ 20ರಷ್ಟು ಬೇಡಿಕೆಯನ್ನು ಪೂರೈಸುತ್ತದೆ

ಅನುಬಂಧ

ಸನ್ 2000–01, 2001–02 ಹಾಗೂ 2002–03ನೇ ಸಾಲಿನಲ್ಲಿ ಪಾಲಿಕೆಯ ವ್ಯಾಪ್ತಿಯಲ್ಲಿ ವರ್ಷವಾರು ಹಾಗೂ ವಿಭಾಗವಾರು ಕೊರೆಯಲಾದ ಕೊಳವೆಬಾವಿಗಳ ವಿವರಣಾ ಪಟ್ಟಿ

ವಿಭಾಗ ನಂಬರ್	ಕೊಳವೆಬಾವಿಗಳ ಸಂಖ್ಯೆ			ವಿಭಾಗ ಸಂಖ್ಯೆ	ಕೊಳವೆಬಾವಿಗಳ ಸಂಖ್ಯೆ		
	2000–01	2001–02	2002–03		2000–01	2001–02	2002–03
1	3	3	13	35	1	1	3
2	4	8	2	36	2	1	3
3	2	7	1	37	1	2	3
4	1	7	–	38	4	2	2
5	1	7	3	39	1	3	–
6	3	4	–	40	1	2	1
7	3	5	6	41	1	–	2
8	2	4	–	42	1	2	–

1	2	3	4	5	6	7	8
9	1	2	3	43	3	2	1
10	2	4	–	44	1	2	1
11	1	5	2	45	3	2	–
12	3	6	1	46	–	2	6
13	3	4	1	47	2	5	1
14	3	6	3	48	2	1	–
15	1	5	2	49	1	1	3
16	2	6	1	50	3	2	–
17	4	2	3	51	1	4	–
18	1	4	3	52	1	3	–
19	2	5	2	53	3	–	4
20	2	5	2	54	1	1	–
21	1	3	1	55	1	4	–
22	2	3	1	56	2	3	1
23	2	5	2	57	1	4	–
24	1	1	6	58	2	2	–
25	3	4	6	59	1	3	1
26	1	2	4	60	3	5	1
27	1	9	6	61	3	4	
28	1	3	1	62	4	2	1
29	1	5	3	63	1	–	2
30	8	3	3	64	4	–	3
31	1	4	5	65	2	–	3
32	1	10	3	66	2	–	4
33	8	–	1	67	1	–	–
34	2	6	5				
				ಒಟ್ಟು	137	227	137

ಸಾರ್ವಜನಿಕ ಉದ್ದಿಮೆಗಳು

40 (165) ಶ್ರೀ ರವೀಂದ್ರನಾಥ ಎಸ್ ವಿ (ಮಾಯಕೊಂಡ) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಬಂಡವಾಳ ಹಿಂತೆಗೆಯುವಿಕೆ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?